RNU AIR DHARWAD

JULY 15, 2025

## AKASHAVANI - DHARWAD

## PRADESH SAMACHARA (KANNADA) 7.05 A.M.

**ಮುಖ್ಯಾಂಶಗಳು:**

**10 ಸಾವಿರ ಕೋಟಿ ರೂಪಾಯಿ** ವೆಚ್ಚದಲ್ಲಿ; ಬೆಳಗಾವಿ–ಹುನಗುಂದ–ರಾಯಚೂರು ಮಧ್ಯೆ, ಚತುಷ್ಪಥ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕಾಮಗಾರಿಗೆ, ಚಾಲನೆ.

**ರಾಜ್ಯದ ವಿವಿಧೆಡೆ,** ಶಕ್ತಿ' ಯೋಜನೆಯ, ಎರಡು ವರ್ಷಗಳ, ಸಂಭ್ರಮಾಚರಣೆ.

**ರಾಜ್ಯದ 35 ಲಕ್ಷ ರೈತರು,** ಪರ್ಯಾಯ ಆದಾಯ ಮೂಲವಾಗಿ, ರೇಷ್ಮೆ ಕೃಷಿ ಮೇಲೆ, ಅವಲಂಬನೆ.

**ಯುವ ಸಬಲೀಕರಣ** ಧ್ಯೇಯದೊಂದಿಗೆ, ಇಂದು ವಿಶ್ವ ಯುವ ಕೌಶಲಗಳ ದಿನ.

<><><>

**ಕಳೆದ ಹನ್ನೊಂದು ವರ್ಷಗಳಲ್ಲಿ,** ಕರ್ನಾಟಕದಲ್ಲಿ ಒಟ್ಟು 9 ಸಾವಿರದ 600 ಕಿಲೋ ಮೀಟರ್ ಉದ್ದದ ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸಲಾಗಿದೆ ಎಂದು, ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿ ಖಾತೆ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ. ಶಿವಮೊಗ್ಗ ಜಿಲ್ಲೆ, ಅಂಬಾರಗೋಡ್ಲು–ಕಳಸವಳ್ಳಿಯ, ಸಿಗಂದೂರು ಸೇತುವೆ ಉದ್ಘಾಟಿಸಿ, ಅವರು ಮಾತನಾಡಿದರು. ಬೆಳಗಾವಿ–ಹುನಗುಂದ–ರಾಯಚೂರು ನಡುವೆ, ಚತುಷ್ಪಥ ಹೆದ್ದಾರಿಯನ್ನು 10 ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ ಎಂದರು.  ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಮಾತನಾಡಿ, ಸಿಗಂದೂರಿನ ಸೇತುವೆಗೆ ಮಾತಾ ಸಿಗಂದೂರು ಚೌಡೇಶ್ವರಿ ಸೇತುವೆ ಎಂದು ನಾಮಕರಣ ಮಾಡಲು, ಕ್ರಮ ಕೈಗೊಳ್ಳಲಾಗುವುದು ಎಂದರು.  ಒಟ್ಟು 9 ರಾಷ್ಟ್ರೀಯ ಹೆದ್ದಾರಿ ಯೋಜನೆಗಳ ಉದ್ಘಾಟನೆ ಹಾಗೂ ಶಂಕು ಸ್ಥಾಪನೆ ನೆರವೇರಿತು.

<><><>

**ವಿಜಯಪುರ ಜಿಲ್ಲೆ, ಇಂಡಿ ತಾಲೂಕು ಬಸ್ ನಿಲ್ದಾಣದಲ್ಲಿ** ಜರುಗಿದ, ಶಕ್ತಿ ಯೋಜನೆ ಸಂಭ್ರಮಾಚರಣೆಯಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಂಡಿದ್ದರು. ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗೆ ಪೂಜೆ ನೆರವೇರಿಸಿ, ಮಹಿಳಾ ಪ್ರಯಾಣಿಕರಿಗೆ ಉಚಿತ ಬಸ್ ಟಿಕೆಟ್ ವಿತರಿಸಿ, ನಿಂಬೆ ಮಂಡಳಿ ಲಾಂಛನವನ್ನು ಬಿಡುಗಡೆಗೊಳಿಸಿದರು. ಬಳಿಕ, 4 ಸಾವಿರದ 157 ಕೋಟಿ ರೂಪಾಯಿ ಮೊತ್ತದ, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು.

<><><>

**ಶಕ್ತಿ ಯೋಜನೆಯಿಂದ,** ಸಾರ್ವಜನಿಕ ಸಾರಿಗೆ ಬಳಸಿ ಪ್ರಯಾಣಿಸುವ ಪ್ರಮಾಣ, ಶೇಕಡ 40ರಷ್ಟು ಹೆಚ್ಚಳವಾಗಿದೆ; ರಾಜ್ಯದ ಮಹಿಳೆಯರ, ಆರ್ಥಿಕ ಸ್ವಾವಲಂಬನೆಗೆ ಸಹಕಾರಿಯಾಗಿದೆ ಎಂದು, ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ ಹೇಳಿದ್ದಾರೆ. ಶಕ್ತಿ ಯೋಜನೆಯಡಿ, ಮಹಿಳೆಯರ ಪ್ರಯಾಣ ಸಂಖ್ಯೆ, 500 ಕೋಟಿ ತಲುಪಿದ ಹಿನ್ನೆಲೆ, ಹುಬ್ಬಳ್ಳಿಯ ಹೊಸೂರು ಪ್ರಾದೇಶಿಕ ಬಸ್ ನಿಲ್ದಾಣದಲ್ಲಿ, ಸಂಭ್ರಮಾಚರಣೆ ನಡೆಸಿ, ಮಾತನಾಡಿದರು. ಶಕ್ತಿ ಯೋಜನೆಗೂ ಮುನ್ನ, ರಾಜ್ಯದಲ್ಲಿ ನಿತ್ಯ ಪ್ರಯಾಣಿಕರ ಸಂಖ್ಯೆ 65 ರಿಂದ 70 ಲಕ್ಷದಷ್ಟಿತ್ತು; ಈಗ 1 ಕೋಟಿ 18 ಲಕ್ಷಕ್ಕೆ ಏರಿಕೆಯಾಗಿದೆ ಎಂದರು. ಗದಗ ಕೇಂದ್ರ ಬಸ್ ನಿಲ್ದಾಣದ ಸಂಭ್ರಮಾಚರಣೆಯಲ್ಲಿ, ಗದಗ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ, ಬಿ.ಬಿ ಅಸೂಟಿ ಪಾಲ್ಗೊಂಡಿದ್ದರು.

<><><>

**ರಾಜ್ಯದ 35 ಲಕ್ಷ ರೈತರು,** ರೇಷ್ಮೆ ಕೃಷಿಯಲ್ಲಿ ತೊಡಗಿದ್ದಾರೆ; ಮೈಸೂರು ರೇಷ್ಮೆ, ವಿಶ್ವ ಪ್ರಸಿದ್ಧ ಎಂದು, ತುಮಕೂರು ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಹೇಳಿದ್ದಾರೆ. ತುಮಕೂರಿನ, ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ, ರೇಷ್ಮೆ ಬೆಳೆ ವಿಚಾರ ಸಂಕಿರಣ ಉದ್ಘಾಟಿಸಿ, ಮಾತನಾಡಿದರು. ರೇಷ್ಮೆ ಹುಳುಗಳಿಗೆ, ಹಿಪ್ಪು ನೇರಳೆ ಅತ್ಯವಶ್ಯ. ರಾಜ್ಯದ ರೇಷ್ಮೆ ಕೃಷಿ ಪರಂಪರಾಗತವಾಗಿದ್ದು, ರೈತರ ಪರ್ಯಾಯ ಆದಾಯ ಮೂಲವಾಗಿದೆ ಎಂದರು.

<><><>

**ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ** ಬ್ಯಾಂಕ್, ನಬಾರ್ಡ್ ನ 44ನೇ ಸಂಸ್ಥಾಪನಾ ದಿನಾಚರಣೆ, ಬೆಂಗಳೂರಿನ ನಬಾರ್ಡ್ ಪ್ರಾದೇಶಿಕ ಕಚೇರಿಯಲ್ಲಿ, ಇಂದು ಮಧ್ಯಾಹ್ನ 12 ಗಂಟೆಗೆ, ಜರುಗಲಿದೆ.

<><><>

**ಧಾರವಾಡ, ಕಮಲಾಪುರದ,** ಸರ್ಕಾರಿ ಮಾದರಿ ಕನ್ನಡ ಪ್ರಾಥಮಿಕ ಶಾಲೆ ಸಂಖ್ಯೆ–4, ಸಾರ್ವಜನಿಕರು, ಖಾಸಗಿ ಹಾಗೂ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ – 'ಟ್ರಿಪಲ್ ಪಿ' ಮಾದರಿಯಲ್ಲಿ, ನೂತನವಾಗಿ ಅಭಿವೃದ್ಧಿ ಪಡಿಸಲಾಗಿದೆ. ಕೋಲ್ ಇಂಡಿಯಾ ಲಿಮಿಟೆಡ್ ಸಂಸ್ಥೆ, ತನ್ನ ಸಾಮಾಜಿಕ ಹೊಣೆಗಾರಿಕೆ ನಿಧಿ ಯೋಜನೆ ಅಡಿ, 1 ಕೋಟಿ 62 ಲಕ್ಷ ರೂಪಾಯಿ ಒದಗಿಸಿ, ಸರ್ಕಾರಿ ಶಾಲೆಯನ್ನು ಸಕಲ ಸೌಲಭ್ಯವುಳ್ಳ ಮಾದರಿ ಶಾಲೆಯನ್ನಾಗಿ, ಅಭಿವೃದ್ಧಿ ಪಡಿಸುವಲ್ಲಿ, ಕೇಂದ್ರದ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ಅವರು, ಮಹತ್ವದ ಪಾತ್ರ ನಿರ್ವಹಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಸಕಲ ಸೌಕರ್ಯವುಳ್ಳ ಸರ್ಕಾರಿ ಶಾಲೆಯ ಕುರಿತು, ಮಾಹಿತಿ ನೀಡಿದ್ದಾರೆ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಸದಸ್ಯ ಈರೇಶ ಅಂಚಟಗೇರಿ.

<><><>

**ಇಂದು, ವಿಶ್ವ ಯುವ ಕೌಶಲಗಳ ದಿನ.** 'ಕೃತಕ ಬುದ್ಧಿಮತ್ತೆ ಹಾಗೂ ಡಿಜಿಟಲ್ ಕೌಶಲಗಳ ಮೂಲಕ ಯುವ ಸಬಲೀಕರಣ', ಎಂಬ ಧ್ಯೇಯದೊಂದಿಗೆ, ಯುವ ಕೌಶಲ ದಿನ ಆಚರಿಸಲಾಗುತ್ತಿದೆ. ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ, 2014, ಜುಲೈ 15 ರಂದು, ವಿಶ್ವ ಯುವ ಕೌಶಲಗಳ ದಿನಾಚರಣೆಯನ್ನು, ಅಧಿಕೃತವಾಗಿ ಘೋಷಿಸಿ, ಇಂದಿಗೆ ಹತ್ತು ವರ್ಷಗಳು ಪೂರ್ಣಗೊಂಡವು.

<><><>

**ಧಾರವಾಡ ಜಿಲ್ಲೆ, ಅಳ್ನಾವರ ತಾಲೂಕು,** ಬೆಣಚಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ, ಸಾಮಾಜಿಕ ಹೊಣೆಗಾರಿಕೆ ನಿಧಿ ಯೋಜನೆ ಅಡಿ, 4 ಲಕ್ಷ ರೂಪಾಯಿ ವೆಚ್ಚದಲ್ಲಿ, ಕೌಶಲ ಪ್ರಯೋಗಾಲಯ ಸ್ಥಾಪನೆಗೊಂಡಿದೆ. ಕಳೆದ ಎರಡು ವರ್ಷಗಳಲ್ಲಿ, 8 ಹಾಗೂ 9 ನೇ ತರಗತಿಯ, 120ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು, ಸ್ಥಳೀಯ ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳನ್ನು ಬಳಸಿಕೊಂಡು, ತರಬೇತಿ ನೀಡಲಾಗಿದೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಸ್ವಾಮಿ ವಿವೇಕಾನಂದ ಯೂತ್ ಮೂವಮೆಂಟ್, ಪ್ರಾದೇಶಿಕ ಮುಖ್ಯಸ್ಥ, ಜಯಂತ ಕೆ.ಎಸ್.

<><><>

**ಧಾರವಾಡ ಜಿಲ್ಲೆ, ಕುಂದಗೋಳ** ತಾಲೂಕು ಭರದ್ವಾಡ ಗ್ರಾಮದಲ್ಲಿ ಸಾಲ ಬಾಧೆಯಿಂದ, ಆತ್ಮಹತ್ಯೆಗೆ ಶರಣಾದ, ಇಬ್ಬರು ರೈತರ ಮನೆಗಳಿಗೆ ಭೇಟಿ ನೀಡಿದ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ, ಕುಟುಂಬಕ್ಕೆ ಸಾಂತ್ವನ ಹೇಳಿದರು. ಕುಟುಂಬಗಳಿಗೆ ತಲಾ ಐದು ಲಕ್ಷ ರೂಪಾಯಿ, ಪರಿಹಾರ ನೀಡಲು, ಮುಖ್ಯಮಂತ್ರಿಯವರಲ್ಲಿ ಮನವಿ ಮಾಡುವುದಾಗಿ ತಿಳಿಸಿದರು.

<><><>

ರೈತರ ಆತ್ಮಹತ್ಯೆ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಲಾಗಿದೆ; ನಿಯಮಾನುಸಾರ ಪರಿಹಾರ ವಿತರಿಸಲು, ಆತ್ಮಹತ್ಯೆ ತಡೆಯಲು ಕ್ರಮ ಕೈಗೊಳ್ಳಲಾಗುವುದು ಎಂದರು.

<><><>

**ನಿನ್ನೆ ನಿಧನರಾದ, ಕನ್ನಡದ ಹಿರಿಯ** ನಟಿ, ಬಿ.ಸರೋಜಾದೇವಿ ಅವರ, ಪಾರ್ಥಿವ ಶರೀರದ ಅಂತ್ಯಕ್ರಿಯೆ, ಇಂದು ಬೆಳಗ್ಗೆ 11.30ಕ್ಕೆ ಚನ್ನಪಟ್ಟಣದ ದಶವಾರದಲ್ಲಿ, ನಡೆಯಲಿದೆ. ಬೆಂಗಳೂರಿನ ಮಲ್ಲೇಶ್ವರಂನ ಅವರ ನಿವಾಸದಲ್ಲಿ, ಹಲವು ಗಣ್ಯರು ಅಂತಿಮ ದರ್ಶನ ಪಡೆದು, ಗೌರವ ಸಲ್ಲಿಸಿದರು.

<><><>

**ರಾಜ್ಯದ, ಶುಶ್ರೂಷಕರ** ನೋಂದಣಿಗಾಗಿ, ವಿಶೇಷ ಡಿ.ಜಿ. ಲಾಕರ್‌ಗೆ, ಇಂದು ಚಾಲನೆ ನೀಡುವುದಾಗಿ, ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಶರಣಪ್ರಕಾಶ ಪಾಟೀಲ, ಕಲಬುರಗಿಯಲ್ಲಿ ತಿಳಿಸಿದ್ದಾರೆ. ಡಿ.ಜಿ. ಲಾಕರ್ ವ್ಯವಸ್ಥೆ, ದೇಶದಲ್ಲಿ ಮೊದಲ ಬಾರಿಗೆ, ಕರ್ನಾಟಕ ರಾಜ್ಯ ಜಾರಿ ಗೊಳಿಸುತ್ತಿದೆ. ರಾಜ್ಯ ಶುಶ್ರೂಷಾ ಪರೀಕ್ಷಾ ಮಂಡಳಿ ಸಹಯೋಗದಲ್ಲಿ, ನೂತನ ತಂತ್ರಾಂಶವನ್ನು, ಅಭಿವೃದ್ಧಿಪಡಿಸಲಾಗಿದೆ ಎಂದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**10 ಸಾವಿರ ಕೋಟಿ ರೂಪಾಯಿ** ವೆಚ್ಚದಲ್ಲಿ; ಬೆಳಗಾವಿ–ಹುನಗುಂದ–ರಾಯಚೂರು ಮಧ್ಯೆ, ಚತುಷ್ಪಥ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕಾಮಗಾರಿಗೆ, ಚಾಲನೆ.

**ರಾಜ್ಯದ ವಿವಿಧೆಡೆ,** ಶಕ್ತಿ' ಯೋಜನೆಯ, ಎರಡು ವರ್ಷಗಳ, ಸಂಭ್ರಮಾಚರಣೆ.

**ರಾಜ್ಯದ 35 ಲಕ್ಷ ರೈತರು,** ಪರ್ಯಾಯ ಆದಾಯ ಮೂಲವಾಗಿ, ರೇಷ್ಮೆ ಕೃಷಿ ಮೇಲೆ, ಅವಲಂಬನೆ.

**ಯುವ ಸಬಲೀಕರಣ** ಧ್ಯೇಯದೊಂದಿಗೆ, ಇಂದು ವಿಶ್ವ ಯುವ ಕೌಶಲಗಳ ದಿನ.

<><><>